<u>ದಿನಾಂಕಃ 12.04.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು</u>

<u>ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಿಂದಃ</u>

4. ಪಿರ್ಯಾದುದಾರರು ನಮ್ಮ ಬಳಿ ಖಾತೆ ತೆರೆಯುವುದಾಗಿ ಚೆಕ್ಕನ್ನು ಪಡೆದುಕೊಂಡಿರುತ್ತಾರೆ ಎಂದು ತಿಳಿಸಿದ್ದು ಸದರಿ ಖಾತೆಗೆ ಸಂಬಂಧಿಸಿದ ದಾಖಲೆ ನನ್ನ ಬಳಿ ಇರುವುದಿಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಆರೋಪಿಯವರು ನನ್ನ ದೊಡ್ಡಮ್ಮನ ಮಗ. ನನ್ನ ಹಾಗೂ ಆರೋಪಿಯವರು ತಂದೆ ಬೇರೆ ಬೇರೆ ಇರುತ್ತಾರೆ. ಆರೋಪಿಯವರು ನನ್ನ ಸ್ವಂತ ಅಣ್ಣ ಆಗಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಆಧಾರ್ ಕಾರ್ಡ್‌ನ್ನು ಹಾಜರು ಪಡಿಸಲು ತೊಂದರೆ ಇಲ್ಲ.

5. ನಾವು ಪಿರ್ಯಾದುದಾರರೊಂದಿಗೆ ತಿಂಗಳಿಗೆ 2-3 ಬಾರಿಯಂತೆ 2 ವರ್ಷದವರೆಗೆ ವ್ಯವಹಾರವನ್ನು ನಡೆಸಿರುತ್ತೇವೆ. ಪಿರ್ಯಾದುದಾರರಿಗೆ ಎಷ್ಟು ಬಾರಿ ನಗದಾಗಿ ಹಾಗೂ ಎಷ್ಟು ಬಾರಿ ಚೆಕ್ಕಿನ ಮೂಲಕ ಹಣವನ್ನು ನೀಡಿರುತ್ತೇನೆ ದಾಖಲೆ ನೋಡದೆ ಹೇಳಲು ಆಗುವುದಿಲ್ಲ. ನಿಡಿ 1 ರಿಂದ 22 ರ ಚೆಕ್ಕುಗಳು ನಗದೀಕರಣಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ 1 ರಿಂದ 22 ರ ಚೆಕ್ಕುಗಳನ್ನು ಹಿಂದಕ್ಕೆ ಪಡೆದುಕೊಂಡು ಪಿರ್ಯಾದುದಾರರಿಗೆ ವಿವಾದಿತ ಚೆಕ್ಕುಗಳನ್ನು ನೀಡಿದ್ದೇವು ಎಂದರೆ ಸರಿಯಲ್ಲ. ಸಾಕ್ಷಿಯು ನಿಡಿ 1 ರಿಂದ 22 ರ ಚೆಕ್ಕುಗಳಿಗೆ ಸಂಬಂಧಿಸಿದಂತೆ ನಗದಾಗಿ ಹಣವನ್ನು ಪಾವತಿಸಿರುತ್ತೇವೆ ಎನ್ನುತ್ತಾರೆ. ಪಿರ್ಯಾದುದಾರರಿಂದ ವಸ್ತುಗಳನ್ನು ಪಡೆದ ಹಣದ ಬಾಬ್ತು ವಿವಾದಿತ ಚೆಕ್ಕನ್ನು ನೀಡಿದ್ದೇವು ಎಂದರೆ ಸರಿಯಲ್ಲ. ಪಿರ್ಯಾದುದಾರರು ನಮ್ಮ ಬಳಿ ಅವರ ವಸ್ತುಗಳಿಗೆ ಸಂಬಂಧಿಸಿದಂತೆ ವಿಚಾರವನ್ನು ಮಾತ್ರ ತಿಳಿಸಿದ್ದು ಯಾವುದೇ ರೀತಿಯ ಕರಾರನ್ನು ಮಾಡಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ನೀಡಬೇಕಾಗಿರುವ ಹಣವನ್ನು ತಪ್ಪಿಸುವ ಉದ್ದೇಶದಿಂದ ಹಾಗೂ ಆರೋಪಿಯವರು ನನ್ನ ಅಣ್ಣ ಆದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಪಿರ್ಯಾದುದಾರರ ಬಳಿ ನಮ್ಮ ಚೆಕ್ಕನ್ನು ಹಿಂದಕ್ಕೆ ಕೊಡಿ ಎಂದು ಯಾವುದೇ ನೋಟಿಸನ್ನು ನೀಡಿರುವುದಿಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

17 ನೇ ಅಪರ ನ್ಯಾಯಾಧೀಶರು
ಮತ್ತು ಎ ಸಿ ಎಂ ಎಂ